

ಮತ್ತಿದು ಮುಂದುವರಿಯುತ್ತದೆ
ಕನ್ನಡಿಗಳು ಮತ್ತು ನೀರು ಇರುವ ತನಕ

ಸುಮ್ಮನೆ ಬಿದ್ದಿದ್ದ ಕನ್ನಡಿ ಚೂರಿನಿಂದ
ಅವನ ಕಾಲು ಕತ್ತರಿಸಿತು.
ರಕ್ತ ಸುರಿಯಿತು.
ಕೀವಾಯಿತು, ಹುಣ್ಣಾಯಿತು.
ಇಂಜೆಕ್ಷನ್ ಚುಚ್ಚಿಸಿಕೊಳ್ಳಲು ಅವನು ಔಷಧದಂಗಡಿಗೆ ಹೋದ,
ಅಂಗಡಿಯ ಹುಡುಗ ಅವನ ಕುರುಡುತನಕ್ಕೆ ವ್ಯಂಗ್ಯವಾಡಿದ.

ಕನ್ನಡಿಗಳಿರುವವರೆಗೆ
ಕುರುಡರಿರುತ್ತಾರೆ, ಕುರುಡಿಯರೂ ಇರುತ್ತಾರೆ
ಕೈಚೀಲಗಳಿರುತ್ತವೆ, ಪ್ರಸಾದನ ಸಾಮಗ್ರಿಗಳೂ ಇರುತ್ತವೆ.
ಜೀವನದ ಗಡಿಗೆರೆಗಳನ್ನು ಗುರುತಿಸುವ ಕೆಲಸವೂ
ಮುಂದುವರಿಯುತ್ತದೆ. ಯಾಕೆಂದರೆ...
ಆ ಗಾಯಕ ಕುರುಡನಾಗಿದ್ದ. ಆ ಹೆಂಗಸರು ಕುರುಡಿಯರು.
ಕವಿ ಕುರುಡ, ಓದುಗರೂ ಕುರುಡರೇ.

ಎಲ್ಲರೂ ಕುರುಡರು
ಕನ್ನಡಿ ಮತ್ತು ನೀರು ಮಾತ್ರವೇ ಸ್ಪಷ್ಟವಾಗಿ ಕಾಣುತ್ತವೆ.

(ಅಸ್ಸಾಮಿಯಿಂದ ಇಂಗ್ಲಿಷ್‌ಗೆ: ಅನಿಂದಿತ ಕೌರ್)

